ದಿನಾಂಕ**: 02.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಪಾಟೀ ಸವಾಲು  ಪ್ರತಿವಾದಿ ಪರ ಶ್ರೀ ಹೆಚ್ ಎನ್ ಕೆ ವಕೀಲರಿಂದಃ-

ಸಾಕ್ಷಿಗೆ ಕನ್ನಡ ಭಾಷೆ ಬರದೇ ಇದ್ದ ಕಾರಣ ಶ್ರೀ ಟಿ ಎನ್ ಕೆ ವಕೀಲರನ್ನು ಭಾಷಾಂತರಗಾರರಾಗಿ ನೇಮಿಸಿಕೊಳ್ಳಲಾಯಿತು.

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಕನ್ನಡದಲ್ಲಿ ಸಹಿಯನ್ನು ಮಾಡುತ್ತೇನೆ. ನಿಡಿ.1 ರಲ್ಲಿ ನನ್ನ ಸಹಿ ಇರುತ್ತದೆ, ಅದನ್ನು ಈಗಾಗಲೇ ನಿಡಿ.1(ಬಿ) ಎಂದು ಗುರುತಿಸಲಾಗಿರುತ್ತದೆ. ನಿಪಿ.1 ರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಎರಡೂ ಪತ್ರಗಳನ್ನು ನಾನು ಓದಿರುವುದಿಲ್ಲ ಎಂದರೆ ಸರಿ. ಸದರಿ ಪತ್ರಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಎರಡೂ ಪತ್ರಗಳನ್ನು ವಾದಿ ನೊಂದಣಿ ಕಚೇರಿಯಲ್ಲಿ ತಯಾರು ಮಾಡಿಸಿರುತ್ತಾರೆ ಎಂದರೆ ಸರಿ. ನಾವು ತಾಲ್ಲೂಕು ಕಚೇರಿಯ ಬಳಿ 10 ಗಂಟೆಯ ನಂತರ ಹೋಗಿರುತ್ತೇವೆ. ಸದರಿ ಪತ್ರಗಳನ್ನು ಪ್ರತಿವಾದಿಯೂ ಓದಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಜೊತೆ ಅವರ ಗಂಡ ಬಂದಿರುತ್ತಾರೆ. ಪ್ರತಿವಾದಿಯ ಗಂಡನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಆ ದಿನ ಪ್ರತಿವಾದಿಯ ಗಂಡ ಬಂದಿರಲಿಲ್ಲ, ಆಗಾಗಿ ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ವಾದಿಯು ಆದಾರ್ ಕಾರ್ಡ್ ಮಾಡಿಸಿಕೊಳ್ಳುತ್ತೇನೆ ಎಂದು ಹೇಳಿ ನಿಪಿ.1 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ವಾದಿ ಈ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪಿ ನಂಬರ್ ಎಂದು ರಿಜಿಸ್ಟರ್ ಆಗುವುದಿಲ್ಲ ಎಂದು ಹೇಳಿ ಮತ್ತೇ ಇನ್ನೊಂದು ಪತ್ರವನ್ನು ವಾದಿಯೂ ಬರೆಸಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ದಿನ ವಾದಿಯೂ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಹಣವನ್ನು ಕೊಟ್ಟಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯೂ ಮನೆಯಲ್ಲಿ ಮಾತುಕತೆಯಾಗಿ ಸಬ್ ರಿಜಿಸ್ಟರ್ ನಲ್ಲಿ ಪಿ ನಂಬರ್ ಆಗಿರುವ ಕಾರಣ ಆ ದಿನ ರಿಜಿಸ್ಟರ್ ಆಗಿರುವುದಿಲ್ಲ ಹಾಗಾಗಿ ಹಿಂತಿರುಗಿ ಬಂದಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಂತರ ಸಬ್ ರಜಿಸ್ಟರ್ ಕಚೇರಿಗೆ ಹೋಗಿರುವುದಿಲ್ಲ. ನಿಪಿ.1 ಕ್ಕೆ ನನ್ನ ಜೊತೆ ನಾರಾಯಣಸ್ವಾಮಿ ಸಹಿ

ಮಾಡಿರುತ್ತಾರೆ. ದಿನಾಂಕ **03.03.2018** ರಂದು ವಿಲ್ ಬರೆದುಕೊಟ್ಟ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಆ ದಿನ ಎಷ್ಟು ದಾಖಲೆಗಳು ರಿಜಿಸ್ಟರ್ ಆಗಿರುತ್ತವೆ ಎಂಬುದು ನನಗೆ ಗೊತ್ತಿಲ್ಲ. ನನಗೆ ದಾವೆಯ ಬಗ್ಗೆ ಗೊತ್ತಿಲ್ಲದೇ ಇದ್ದರೂ ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ವಾದಿಯನ್ನು ಹಣವನ್ನು ಕೇಳುತ್ತಿದ್ದರು ಆಗಾಗಿ ನ್ಯಾಯಾ ಸೇರಿದ್ದರು ಎಂದು ಉತ್ತರಿಸಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.